**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/267 /ಇಎಸ್‌ಟಿ (8)ಎ ವೈವೆ 2015 /2170

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ:25.10.2016.

**ಸುತ್ತೋಲೆ**

ವಿಷಯ: ಸರ್ಕಾರದ ಮಾನ್ಯತೆ ಪಡೆಯದ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಯ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್ಲುಗಳನ್ನು ಮೇಲು ರುಜುವಿಗಾಗಿ ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ.

*******

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರತಕ್ಕ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ/ಸರ್ಕಾರಿ ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆ ಪ್ರಾಚಾರ್ಯರುಗಳಿಗೆ ತಿಳಿಯಪಡಿಸುವುದೇನೆಂದರೆ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಲ್ಲಿ ಮರುಪಾವತಿ ಮಾಡುವ ಸಂಭವ ಬಹಳ ವಿರಳ ಆದ್ದರಿಂದ ನೌಕರರು ತಮ್ಮ ಹಾಗೂ ಕುಟುಂಬದ ಸದಸ್ಯರ ವೈದ್ಯಕೀಯ ಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆಯಲು ಸೂಚಿಸಲಾಗಿದೆ. ವೈದ್ಯಕೀಯ ವೆಚ್ಚ ಮರುಪಾವತಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಮಾನ್ಯತೆ ಪಡೆಯದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಲ್ಲಿ ಅದರ ವೈದ್ಯಕೀಯ ವೆಚ್ಚವನ್ನು ಮರುಪಾವತಿ ಮಾಡುವಂತೆ ಕೋರಿ ನಿರ್ದೇಶನಾಲಯಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ, ಈ ರೀತಿ ಸಲ್ಲಿಸಿರುವ ಪ್ರಸ್ತಾವನೆಗಳಲ್ಲಿ ಈ ಕೆಳಕಂಡ ಬಹುಮುಖ್ಯವಾದ ಅಂಶಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ ಕಳುಹಿಸಿಕೊಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

1. ಸರ್ಕಾರದ ಅನೇಕ ಪ್ರತಿಷ್ಠಿತ ಆಸ್ಪತ್ರೆಗಳಿದ್ದರೂ ಹಾಗೂ Government recognized reputed referral private Hospital ಗಳಿದ್ದರೂ ಸಹ ಅಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳದೆ ಇರಲು ಕಾರಣಗಳೇನು/ಔಚಿತ್ಯವೇನು? ಇಂತಹ ಚಿಕಿತ್ಸೆಗಳು/ treatment facilities ಗಳು Government teaching Hospitals ಗಳಲ್ಲಿ ಹಾಗೂ Government recognized reputed referral private Hospital ಇದ್ದರೂ, ಏತಕ್ಕಾಗಿ avail ಮಾಡಿಕೊಂಡಿರುವುದಿಲ್ಲ ಎಂಬುದರ ಬಗ್ಗೆ ಲಿಖಿತವಾದ ವಿವರಣೆಯನ್ನು ಸಲ್ಲಿಸಿರಬೇಕು.
2. ಈ ರೀತಿಯಾಗಿ Government unrecognized Hospitals ಗಳಲ್ಲಿ ಚಿಕಿತ್ಸೆ ಪಡೆಯುವಂತಹ ಅನಿವಾರ್ಯ ಪ್ರಸಂಗ/ತುರ್ತು ಪರಿಸ್ಥಿತಿಗಳಾದರೂ ಏನು ಎಂಬ ಬಗ್ಗೆ ವಿಶ್ಲೇಷಣೆ ಅವಶ್ಯವಿರುತ್ತದೆ ಹಾಗೂ ಚಿಕಿತ್ಸೆ ಪಡೆದುಕೊಂಡಿರುವ ಖಾಯಿಲೆಯ ಸ್ವರೂಪ ಮತ್ತು ಇಂತಹ ಚಿಕಿತ್ಸೆಗಳು ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರದಿಂದ ಅನುಮೋದಿಸಲ್ಪಟ್ಟು ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲವೇ ಎಂಬ ಬಗ್ಗೆಯೂ ಹಾಗೂ ಹೀಗೆ ನೌಕರರಿಗೆ ಅನುಕೂಲವಾಗತಕ್ಕಂತಹ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡು ತದನಂತರ ಸಡಿಲಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಲು ಯಾವುದೇ Footing/ justification ಇರುವುದೇ ಎಂಬ ಬಗ್ಗೆಯೂ ಪ್ರಿನ್ಸಿಪಾಲರ ಹಂತದಲ್ಲಿಯೇ ಪರಿಶೀಲನೆ ಮಾಡಿ ವೈದ್ಯಕೀಯ ವೆಚ್ಚ ಮಾಡಬೇಕೇ ಅಥವಾ ಬೇಡವೆ ಎಂಬ ಬಗ್ಗೆ ಶಿಫಾರಸ್ಸನ್ನು ಸಹ ಸಲ್ಲಿಸತಕ್ಕದ್ದು.

.......2

ಮೇಲ್ಕಂಡ ಸೂಚನೆಗಳನ್ನು ಪಾಲಿಸದೆ ಕಳುಹಿಸಿದ ಬಿಲ್ಲುಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳದೆ ಹಿಂದಿರುಗಿಸಲಾಗುವುದು. ಮೇಲ್ಕಂಡ ಅಂಶಗಳನ್ನು ಪರಿಶೀಲಿಸದ ನಂತರ ಅರ್ಹತೆ ಇದ್ದಲ್ಲಿ ಮಾತ್ರ ಸಿಬ್ಬಂದಿಯವರ ಬಿಲ್ಲುಗಳನ್ನು ನಿರ್ದೇಶನಾಲಯದಲ್ಲಿ ಮೇಲು ಸಹಿಗಾಗಿ ಕಳುಹಿಸತಕ್ಕದ್ದು. ಪ್ರಸ್ತಾವನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ ಅರ್ಹತೆಯಿಲ್ಲದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ತಮ್ಮ ಹಂತದಲ್ಲಿಯೇ ತಿರಸ್ಕರಿಸಲು ಮತ್ತೊಮ್ಮೆ ಎಲ್ಲಾ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

ನಿರ್ದೇಶಕರು

ಇವರಿಗೆ

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ ವ್ಯಾಪ್ತಿಗೊಳಪಡುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ, ಸರ್ಕಾರಿ ಪಾಲಿಟೆಕ್ನಿಕ್/ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ/ಸರ್ಕಾರಿ ಗಣಿ ಶಿಕ್ಷಣ ಶಾಲೆ ಸ್ಪರಿಕ್ ಪ್ರಾಚಾರ್ಯರುಗಳಿಗೆ ಮೇಲಿನ ಆದೇಶಗಳನ್ನು ನಿಮ್ಮ ಸಂಸ್ಥೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ಗಮನಕ್ಕೆ ತರಲು ಸೂಚಿಸಿದೆ.